ನನ್ನ ತಂಗಿ ನೇಹಾ

ಮಧು ಬಿ. ಜೋಷಿ

ಅನುವಾದ
ಎಚ್. ನಾಗರಾಜಪ್ಪ



ISBN 978-81-237-5856-5

ಮೊದಲ ಮುದ್ರಣ : 2010
ಎರಡನೆಯ ಮರುಮುದ್ರಣ : 2021 (ಶಕ 1943)

Neha, My Sister (*English*)
Nanna Thangi Neha (*Kannada*)

₹ 45.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ನೆಹರೂ ಬಾಲಪುಸ್ತಕಾಲಯ

ನನ್ನ ತಂಗಿ ನೇಹಾ

ಮಧು ಬಿ. ಜೋಷಿ

ಚಿತ್ರಗಳು

ಪಾರ್ಥ ಸೇನಗುಪ್ತ

ಅನುವಾದ

ಎಚ್. ನಾಗರಾಜಪ್ಪ

nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಒಂದು ದಿನ ಬೆಳಿಗ್ಗೆ ಅಪ್ಪ ನನ್ನನ್ನು ಬೇಗ ಎಬ್ಬಿಸಿದ.

"ಏಳು ಮಗೂ, ಕಣ್ಣು ತೆರೆ. ಆಗಲೇ ಬೆಳಗಾಗಿದೆ."

ಅಮ್ಮ ಎಲ್ಲಿ? ಪ್ರತಿ ದಿನ ಆಕೆ ನನ್ನನ್ನು ಎಬ್ಬಿಸುತ್ತಾಳೆ. ಇಂದು ಏನಾಗಿದೆ ಅವಳಿಗೆ?

"ಅಪ್ಪ, ಅಮ್ಮ ಎಲ್ಲಿ?"

"ಅಮ್ಮ ಆಸ್ಪತ್ರೆಯಲ್ಲಿದ್ದಾಳೆ" ಅಪ್ಪ ಉತ್ತರಿಸಿದ.

ಯಾರೇ ಆಗಲಿ ಕಾಯಿಲೆಯಾದಾಗ ಮಾತ್ರ ಆಸ್ಪತ್ರೆಗೆ ಹೋಗುವುದು. ಆಸ್ಪತ್ರೆ ಎಂದರೆ ನೋವಿನ ಚುಚ್ಚುಮದ್ದು ಮತ್ತು ಕಹಿಯಾದ ಮಾತ್ರೆಗಳು...ಅಮ್ಮ ಆಸ್ಪತ್ರೆಯಲ್ಲಿದ್ದಾಳೆ. ಅವಳಿಗೆ ಕಾಯಿಲೆಯಾಗಿರಲೇ ಬೇಕು. ನಾನು ಜೋರಾಗಿ ಅತ್ತೆ, "ಅಮ್ಮ ಬೇಕೂ!"

ಅಪ್ಪ ನಕ್ಕ, "ಅಳಬೇಡ ಪ್ರೀತಿ."

"ನಾನು ಶಾಲೆಗೆ ಹೇಗೆ ಹೋಗಲಿ?"

"ನಾನು ಬಟ್ಟೆ ಹಾಕುತ್ತೇನೆ, ಪ್ರೀತಿ. ನಿನ್ನನ್ನು ಶಾಲೆಗೆ ಬಿಡುತ್ತೇನೆ." ಅಪ್ಪನ ಮುಖದಲ್ಲಿ ಇನ್ನೂ ನಗು ಇತ್ತು.







ಅಪ್ಪ ನನಗೆ ಬಟ್ಟೆ ಹಾಕಿದ. ಬೂಟು ಹಾಕಿಕೊಳ್ಳಲು ಸಹಾಯ ಮಾಡಿದ. ತಲೆ ಬಾಚಿದ.

ಅವನು ನನಗೆ ಚಪಾತಿ ಕೊಟ್ಟ. ಬೇಕಾದಷ್ಟು ಉಪ್ಪಿನಕಾಯಿ ಹಾಕಿಧ. ಹಾಲು ಕುಡಿಯಲು ನನಗೆ ಒತ್ತಾಯಿಸಲೇ ಇಲ್ಲ. ನನ್ನ ಅಪ್ಪ! ನನ್ನ ಪ್ರೀತಿಯ ಅಪ್ಪ!

ಅಪ್ಪ ನನ್ನನ್ನು ಶಾಲೆಯವರೆಗೆ ಬಿಟ್ಟ. ರಿತು ಅವಳ ಅಮ್ಮನೊಡನೆ ಬಂದಿದ್ದಳು. ಮಿನೂ ಅವಳ ಅಮ್ಮನೊಡನೆ ಬಂದಳು. ಸಲಿಲ್ ಮತ್ತು ಅಜಯ್



ಸಹ ಅವರ ಅಮ್ಮಂದಿರೊಡನೆ ಬಂದರು. ನನ್ನ ಅಮ್ಮ ಆಸ್ಪತ್ರೆಯಲ್ಲಿದ್ದಾಳೆ! ಅವಳಿಗೆ ಕಾಯಿಲೆಯಾಗಿರಲೇ ಬೇಕು.

ನಾನು ಅಳಲು ಶುರುಮಾಡಿದೆ. ಗಂಟಲು ನೋಯತೊಡಗಿತು.

"ಪ್ರೀತಿ, ಯಾಕೆ ಅಳುತ್ತಿರುವೆ?" ಸುಮನ್ ಮೇಡಂ ವಿಚಾರಿಸಿದರು.

"ನನ್ನ ಅಮ್ಮ ಆಸ್ಪತ್ರೆಯಲ್ಲಿದ್ದಾಳೆ!"

ಸುಮನ್ ಮೇಡಂ ಅವರ ಮನೆ ಇರುವುದು ನಮ್ಮ ಮನೆ ಎದುರಿಗೇ. ನನ್ನ ಮಾತು ಕೇಳಿ ಮೇಡಂ ನಕ್ಕರು. "ಅಳಬೇಡ ಪ್ರೀತಿ, ನಿನ್ನ ಅಮ್ಮನಿಗೆ ಏನೂ ಆಗಿಲ್ಲ."

ಏನೂ ಆಗದಿದ್ದರೆ ಅಮ್ಮ ಆಸ್ಪತ್ರೆಯಲ್ಲೇಕೆ ಇದ್ದಾಳೆ? ಅಪ್ಪ ಮತ್ತು ಸುಮನ್ ಮೇಡಂ ನನ್ನ ಮಾತಿಗೆ ನಗುತ್ತಾರೆ ಯಾಕೆ?

ಢಣಣಣಣಣ.....ಢಣಣಣಣಣ.....ಢಣಣಣಣಣ..... ಗಂಟೆ ಬಾರಿಸಿತು. ಅದು ಊಟದ ಸಮಯ. ರಿತು ಹೇಳಿದಳು, "ನಿನ್ನ ಅಮ್ಮ ಆಸ್ಪತ್ರೆಯಿಂದ ನಿನಗೊಬ್ಬಳು ತಂಗಿಯನ್ನು ತರುತ್ತಾರೆ." ಸಲಿಲ್ ಹೇಳಿದ, "ನನ್ನ ಅಮ್ಮನೂ ಆಸ್ಪತ್ರೆಯಿಂದ ಒಬ್ಬ ತಮ್ಮನನ್ನು ತಂದಿದ್ದಳು."







"ಆದರೆ ನನ್ನ ಅಜ್ಜಿ ಆಸ್ಪತ್ರೆಯಿಂದ ಏನನ್ನೂ ತರಲೇ ಇಲ್ಲ!" ಮಿನೂ ದೂರಿದಳು.

ಅಮ್ಮ ತರುವುದು ತಮ್ಮನನ್ನೊ ಅಥವಾ ತಂಗಿಯನ್ನೊ?

ಶಾಲೆ ಮುಗಿದ ಮೇಲೆ ಅಪ್ಪ ನನ್ನನ್ನು ಕರೆದೊಯ್ಯಲು ಬಂದ. "ಅಪ್ಪ, ಅಮ್ಮ ನನಗಾಗಿ ಯಾರನ್ನು ತಂದಿದ್ದಾಳೆ? ತಮ್ಮನನ್ನೊ ಅಥವಾ ತಂಗಿಯನ್ನೊ?" ಕೇಳಿದೆ.

"ಅಮ್ಮ ನಿನಗೆ ಪುಟ್ಟ ತಂಗಿಯನ್ನು ತಂದಿದ್ದಾಳೆ." ಅಪ್ಪಗೆ ತುಂಬಾ ಸಂತೋಷವಾಗಿತ್ತು.


"ನನ್ನ ತಂಗಿಯನ್ನು ನೋಡಲು ಹೋಗೋಣವೆ?"

"ಸಂಜೆ ಹೋಗೋಣ" ಅಪ್ಪ ಹೇಳಿದ.

ಮಧ್ಯಾಹ್ನದ ಊಟಕ್ಕೆ ಅಪ್ಪ ಚಿತ್ರಾನ್ನ ಮಾಡಿದ್ದ. ಅದರಲ್ಲಿ ನನಗೆ ಇಷ್ಟವಾದ ಬಹಳಷ್ಟು ಬಟಾಣಿ ಕಾಳುಗಳಿದ್ದವು. ಸಾಕಷ್ಟು ಕೇಸರಿಬಾತ್ ಸಹ ತಿಂದೆ. ಆನಂತರ ನಿದ್ದೆಹೋದೆ.

ಸಂಜೆ ನನಗೆ ಬಹಳ ಇಷ್ಟವಾದ ಕೆಂಪು ಲಂಗ ಹಾಕಿಕೊಂಡೆ. ಅಪ್ಪ ನನ್ನ ತಲೆ ಬಾಚಿದ. ನಾವು ಆಸ್ಪತ್ರೆಗೆ ಹೋದೆವು.

ಅಮ್ಮ ದೊಡ್ಡ ಕೋಣೆಯಲ್ಲಿ ಹಾಸಿಗೆಯ ಮೇಲೆ ಮಲಗಿಕೊಂಡಿದ್ದಳು. ಅವಳ ಹಾಸಿಗೆಯ ಪಕ್ಕದಲ್ಲಿ ಪುಟ್ಟದಾದ ಒಂದು ತೊಟ್ಟಿಲು ಇತ್ತು. ಆ ತೊಟ್ಟಿಲಲ್ಲಿ ನನ್ನ ಮುದ್ದಿನ ಪುಟಾಣಿ ತಂಗಿಯಿದ್ದಳು. ಅವಳದು ಪುಟ್ಟ ಗುಲಾಬಿ ಬಣ್ಣದ ಮುಖ. ಪುಟಾಣಿ ಕಪ್ಪು ಕಣ್ಣುಗಳು ಮತ್ತು ಸಣ್ಣ ಸಣ್ಣ ಕೂದಲುಗಳು. ಆದರೆ ಆಕೆ ಜೋರಾಗಿ ಕೂಗುತ್ತಾಳೆ, "ಊಂವ್, ಊಂವ್!"



“ತಂಗಿಯನ್ನು ತೊಡೆಯ ಮೇಲೆ ಕೂರಿಸಿಕೊಳ್ಳಲೆ?” ಅಮ್ಮಗೆ ಕೇಳಿದೆ. “ಈಗಲೇ ಬೇಡ, ಮಗು. ಆಕೆಯಿನ್ನೂ ಬಹಳ ಚಿಕ್ಕವಳು” ಅಪ್ಪ ಹೇಳಿದ.

“ಆಕೆ ಸ್ವಲ್ಪ ದೊಡ್ಡವಳಾಗಲಿ. ಆಗ ನೀನು ಎತ್ತಿಕೊಳ್ಳಬಹುದು” ಅಮ್ಮ ಹೇಳಿದಳು.

“ಆಕೆಗೆ ಹೆಸರೇನು ಇಡುವೆ?” ಅಪ್ಪ ಕೇಳಿದ.

ನಾನು ಸ್ವಲ್ಪ ಹೊತ್ತು ಯೋಚಿಸಿ ಹೇಳಿದೆ, “ನೇಹಾ.”

ಅಂದು ಭಾನುವಾರ. ಅಮ್ಮ ಹಾಗೂ ನೇಹಾಳನ್ನು ಮನೆಗೆ ಕರೆತಂದೆವು.

ರಿತು, ಮಿನೂ, ಅಜಯ್, ಸಲಿಲ್ ಎಲ್ಲರೂ ನೇಹಾಳನ್ನು ನೋಡಲು ಬಂದರು. “ವಾಹ್! ಆಕೆ ಪುಟ್ಟ ಗೊಂಬೆಯಂತಿದ್ದಾಳೆ” ರಿತು ಹೇಳಿದಳು. “ಆಕೆಯ ಕೈ ನೋಡು ಎಷ್ಟೊಂದು ಸಣ್ಣಗಿದೆ” ಅಜಯ್ ಹೇಳಿದ.







"ನೇಹಾ ನಮ್ಮನ್ನೆಲ್ಲ ನೋಡುತ್ತಿದ್ದಾಳೆ" ಮಿನೂ ಹೇಳಿದಳು. ನೇಹಾ ಮಾತ್ರ "ಬೂ....!" ಎನ್ನುತ್ತಿದ್ದಳು.

"ಈಕೆಗೆ ಹಲ್ಲುಗಳೇ ಇಲ್ಲ. ವಯಸ್ಸಾದ ಮುದುಕಿ!" ಸಲಿಲ್ ಹೇಳಿದ. ಎಲ್ಲರೂ ನಕ್ಕರು.

"ಹೊಸದಾಗಿ ಹುಟ್ಟಿದ ಮಕ್ಕಳಿಗೆ ಹಲ್ಲು ಇರುವುದಿಲ್ಲ" ಅಮ್ಮ ತಿಳಿಸಿದಳು.

ನನ್ನ ಚಿಕ್ಕ ತಂಗಿಯನ್ನು ನಾನು ಬಹಳ ಪ್ರೀತಿಸುತ್ತೇನೆ. ನಾನು ಅವಳಿಗಿಂತ ದೊಡ್ಡವಳು. ಅವಳ ಅಕ್ಕ. ಈಗೀಗ ನಾನು ಅವಳನ್ನು ನನ್ನ ತೊಡೆಯ ಮೇಲೆ ಕೂರಿಸಿಕೊಳ್ಳಲು ಶುರುಮಾಡಿದ್ದೇನೆ. ನಾನು ಗಿಲಕಿ ಆಡಿಸಿದಾಗ ಆಕೆ ನಗುತ್ತಾಳೆ. ನಾನು ಶಾಲೆಯಿಂದ ಬಂದಾಗ ನೇಹಾ "ವಾವ್, ಉವಾವ್" ಎನ್ನುತ್ತಾಳೆ. ಅದರ ಅರ್ಥ ನನಗೆ ಗೊತ್ತು. "ನನ್ನ ಅಕ್ಕ ಬಂದಳು" ಎಂಬುದೇ ಅದರ ಅರ್ಥ. ನೇಹಾಳ ಭಾಷೆಯೇ ಬೇರೆ.

ನೇಹಾ ಬಾಟಲಲ್ಲಿ ಹಾಲು ಕುಡಿಯುತ್ತಾಳೆ. ಕೆಲವು ಬಾರಿ ಅವಳಿಗೆ ಹಾಲು ಕುಡಿಸಲು ಅಮ್ಮ ನನಗೆ



ಬಿಡುತ್ತಾಳೆ. ನೇಹಾ ಈಗೀಗ ಬಹಳ ತುಂಟಿಯಾಗುತ್ತಿದ್ದಾಳೆ. ಆಕೆ ಹಾಲಿನಿಂದ ಗುಳ್ಳೆ ಹೊರಡಿಸುತ್ತಾ 'ಫೂ...' ಎಂಬ ಶಬ್ದ ಮಾಡುತ್ತಾಳೆ. ನಾನು ಆಕೆಗೆ ಮುತ್ತು ಕೊಟ್ಟಾಗ ನಗುತ್ತಾಳೆ. ತೊಟ್ಟಿಲು ತೂಗಿದಾಗ ಅದರ ಗಂಟೆಗಳು ಸದ್ದು ಮಾಡುತ್ತವೆ. ಗಂಟೆಗಳ ನಾದ ಎಲ್ಲ ಕಡೆ ಹರಡುತ್ತದೆ. ಹೂವುಗಳಲ್ಲಿ, ಮೀನಲ್ಲಿ ಮತ್ತು ಹಕ್ಕಿಗಳಲ್ಲಿ.

ಅಮ್ಮನ ಜೊತೆಗೆ ನಾನು ನಿಧಾನವಾಗಿ ಹಾಡುತ್ತೇನೆ:

ಮಲಗೆನ್ನ ಗೊಂಬೆಯೆ ಮಲಗು
ಕೆಂಪಾನೆ ತೊಟ್ಟಿಲಲಿ ನೀ ಮಲಗು
ಚಂದ್ರಮ ನಿನ್ನ ಕನಸಿನಲಿ ಬರಲಿ
ಹಾಲು ಕೆನೆ ತುಂಬಿದ ಚಾಕೋಲೆಟ್ ತರಲಿ...





ನೇಹಾ ರೆಪ್ಪೆ ಮುಚ್ಚಿದಳು. ತಕ್ಷಣ ಆಕೆಯ ಮುಖದಲ್ಲಿ ಮುಗುಳ್ನಗೆ ಕಾಣಿಸಿಕೊಂಡಿತು. ಕೊನೆಗೆ ನನ್ನ ತಂಗಿ ನೇಹಾ ನಿದ್ದೆಹೋದಳು.



Printed at: Chandu Press, Delhi-110092





nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 45.00
ISBN 812375856-1
9788123758565
21221933
Neha, My Sister *(Kannada)*